ಬೇಕಾದಷ್ಟು ಇದೆ. ಅನೇಕ ಜನ ತಿಳುವಳಿಕೆ ಇಲ್ಲದೇ ಅರ್ಜಿಯನ್ನೇ ಹಾಕಲಿಲ. ೨೦ ವರ್ಷ ಮಾಡಿರುವವರೂ ಹಾಕಿಲ್ಲ. ರಾಜ್ಯದಲ್ಲಿ ಈ ಬಗ್ಗೆ ಒತ್ತಡ ಬಂದಮೇಲೆ ಕಾನೂನು ತಂದಿದ್ದೇವೆ. ಇದರಿಂದಲೇ ಸರ್ಕಾರದ ಸದುದ್ದೇಶ ಸ್ಪಷ್ಟವಾಗುತ್ತದೆ. ಮುಸೂದೆ ಬಂದಾಗ ಏನು ಸಲಹೆ ಕೊಡುತ್ತೀರಿ ಅದನ್ನು ಸ್ವೀಕಾರ ಮಾಡುತ್ತೇನೆ. ಪ್ರಶ್ನೋತ್ತರ ಕಾಲದಲ್ಲಿ ಹೆಚ್ಚು ಚರ್ಚೆಮಾಡುವುದ ಕ್ಕಾಗುವುದಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಆದಾಗ್ಯೂ ಇಲ್ಲಿಯವರೆಗೆ ೭ ಪ್ರಶ್ನೆಗಳು ಮಾತ್ರ ಮುಗಿದಿವೆ. ಇನ್ನೂ ೧೪ ಪ್ರಶ್ನೆತಳು ಇದ್ದು ಲ್ಲಿವುಗಳನ್ನು ಲ್ಯಾಪ್ಸ್ ಮಾಡುವುದು ಬೇಡ. ಆದ್ದರಿಂದ ಪ್ರಶ್ನೆ ಕೇಳುವ ಸದಸ್ಯರು ಕೇವಲ ಒಂದೊಂದೇ ಉಪಪ್ರಶ್ನೆಗಳನ್ನು ಕೇಳಿದರೆ ನಿಮ್ಮೆಲ್ಲರ ದೃಷ್ಟಿಯಿಂದ ಒಳ್ಳೆಯದಾಗುತ್ತದೆ. ಮುತ್ತೆ ಪ್ರಶ್ನೆ ಕೇಳಿದವರಲ್ಲದೇ ಬೇರೆಯವರು ಉಪಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ. ಈಗ ಮಾನ್ಯ ಕೆ. ಹೆಚ್. ಪಾಟೀಲರು ಪ್ರಶ್ನೆ ಕೇಳಲಿ.

ಕೆ. ಸಿ. ಸಿ. ಬ್ಯಾಂಕ್‌ನಲ್ಲಿ ನಾಮ ನಿರ್ದೇಶನ

೮೯೮ (೧೮೪೨) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೆ. ಸಿ. ಸಿ. ಬ್ಯಾಂಕ್ ಧಾರವಾಡ ಎಷ್ಟು ಬಂಡವಾಳವನ್ನು ಷೇರು ರೂಪದಲ್ಲಿ ಸಂಗ್ರಹಿಸಿದೆ?

ಆ) ಬ್ಯಾಂಕಿನ ಆಡಳಿತ ಮಂಡಳಿಗೆ ನಾಮ ನಿರ್ದೇಶನಗೊಂಡಿರು ವ್ಯಕ್ತಿಗಳ ಸಂಖ್ಯೆ?

ಇ) ಈ ನಾಮ ನಿರ್ದೇಶನಗಳನ್ನು ಚುನಾವಣೆಯ ಸಮಯದಲ್ಲಿ ಮಾಡಲಾಗಿದೆ ಯೆಂಬುದ ನಿಜವೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ದಿನಾಂಕ ೩೦-೬-೮೭ಕ್ಕೆ ರೂ. ೩೫೩.೮೩ ಲಕ್ಷಗಳು.

ಆ) ಸರ್ಕಾರದಿಂದ ನಾಲ್ಕು ಜನರನ್ನು ನಾಮ ನಿರ್ದೇಶನ ಮಾಡಲಾಗಿದೆ.

ಇ) ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಕನ್ನಡದಲ್ಲೇ ನಾನು ಕೇಳುತ್ತೇನೆ. ನಾನು ಮೊದಲೇ ಕೇಳಿದ್ದೇನೆ. ಕನ್ನಡದಲ್ಲಿ ''ಕೆ. ಸಿ. ಸಿ. ಬ್ಯಾಂಕ್, ಧಾರವಾಡ ಎಷ್ಟು ಬಂಡವಾಳವನ್ನು ಷೇರು ರೂಪದಲ್ಲಿ ಸಂಗ್ರಹಿಸಿದೆ'' ಎಂದು ಪ್ರಶ್ನೋತ್ತರ ಪಟ್ಟಿಯಲ್ಲಿದೆ. ನಾನು ಕೇಳಿದ್ದು ''ಕೆ. ಸಿ. ಸಿ. ಬ್ಯಾಂಕ್‌ನವರು ಷೇರುಗಳ ರೂಪದಲ್ಲಿ ಪಡೆದ ಬಂಡವಾಳವೆಷ್ಟು'' ಎಂದು ಸರ್ಕಾರದಿಂದ ಪಡೆದ ಬಂಡವಾಳ ಎಷ್ಟು ಎಂದು ಹೇಳಬೇಕು. ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ, ಸರ್ಕಾರದಿಂದ ನಾಲ್ಕು ಜನರನ್ನು ನಾಮನಿರ್ದೇಶನ ಮಾಡಲಾಗಿದೆ ಎಂದಿದ್ದೀರಿ. ಇದನ್ನು ಯಾವ ಕಾನೂನಿನ ಪ್ರಕಾರ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಕೊನೆ ಪ್ರಶ್ನೆ ''ಚುನಾವಣೆಗಳಿಗೋಸ್ಕರವಾಗಿ ಅಂತಹ ನಾಮ ನಿರ್ದೇಶನಗಳನ್ನು ಮಾಡಿರುವುದು ನಿಜವೇ ?'' ಎನ್ನುವ ಪ್ರಶ್ನೆಗೆ ಇಂಗ್ಲೀಷ್‌ನಲ್ಲಿ ಹೌದು ಎಂದು ಕನ್ನಡದಲ್ಲಾದರೆ 'ಇಲ್ಲ' ಎಂದು ಹೇಳುತ್ತೀರಿ. ಸರ್ಕಾರದ ಸದುದ್ದೇಶ ಇದರಿಂದಲೇ ಸ್ಪಷ್ಟವಾಗುತ್ತದೆ. ಚುನಾವಣೆಯ ಸಲುವಾಗಿ ಮಾಡಿಲ್ಲ ಎಂದು ಹೇಳುತ್ತಿದ್ದೀರಿ. ಅಧ್ಯಕ್ಷರೇ, ತಾವೂ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡಿದವರು. ನಿಮಗೂ ವಿಷಯ ಗೊತ್ತಿದೆ. ಇವತ್ತು ಕೆ. ಸಿ. ಸಿ. ಬ್ಯಾಂಕ್‌ನವರಿಗೆ ಇನ್ನೂ ನೀವು ಷೇರ್ ಹಣವನ್ನು ರಿಲೀಸ್ ಮಾಡಿಲ್ಲ. ಏತಕ್ಕೆ ನೀವು ಷೇರ್ ಸ್ಯಾಕ್ಷನ್ ಮಾಡಿದ್ದೀರಿ ? ಎಲ್ಲಿ ಬೋರ್ಡ್ ರದ್ದು ಆಗುತ್ತದೆಯೋ ಎಂದು ದಗಾಬಾಜಿಯಿಂದ ಇದನ್ನು ಮಾಡಿದೀರಾ ? ನಾಮಕರಣ ಮಾಡುವಾಗ ಷೇರ್ ಹಣವನ್ನು ರಿಲೀಸ್ ಮಾಡಿ. ಸಹಕಾರ ಇಲಾಖೆಯವರು ಆರ್ಡರ್ ಮಾಡಬೇಕು. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ರೊಕ್ಕ ಕೊಟ್ಟಿಲ್ಲ. ನಾಲ್ಕುಮಂದಿ ನಾಮಕರಣವನ್ನು ಮಾಡಿ ಅಧಿಕಾರವನ್ನು ಪಡೆಯುವುದಕ್ಕೆ ಸರ್ಕಾರ ಈ ರೀತಿ ಮಾಡಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಕನ್ನಡದಲ್ಲಿ ಹಾಗೂ ಇಂಗ್ಲೀಷ್‌ನಲ್ಲಿರುವ ಪ್ರಶ್ನೆಗಳು ಹೇಗಿವೆ ಎಂಬುದನ್ನು ವಿಷದೀಕರಿಸುತ್ತೇನೆ. ಇಂಗ್ಲೀಷ್‌ನಲ್ಲಿ ಏನು ಪ್ರಶ್ನೆ ಕೇಳಿದ್ದಾರೆಂದರೆ ಪ್ರಿಂಟ್ ಮಾಡಿರುವುದನ್ನು ನೋಡಿ ಅದರಲ್ಲಿ Whether it is a fact that such nominations were

made on the eve of the elections ? I have said, Yes. ಕನ್ನಡದಲ್ಲಿ ಕೇಳಿರುವ ಪ್ರಶ್ನೆಗೆ ಚುನಾವಣೆಗೋಸ್ಕರ ನಾಮನಿರ್ದೇಶನ ಮಾಡಲಾಗಿದೆಯೇ ಎಂದು ಇರುವುದಕ್ಕೆ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಶ್ನೆಯಯಲ್ಲಿ ಏನೆಂದು ಇದೆ 'ಈ ನಾಮ ನಿರ್ದೇಶನಗಳನ್ನು ಚುನಾವಣೆಯ ಸಮಯದಲ್ಲಿ ಮಾಡಲಾಗಿದೆಯೆಂಬುದು ನಿಜವೇ ? ಎಂದು ಇದೆ ಅದಕ್ಕೆ ತಾವು 'ಹೌದು' ಎಂದು ಉತ್ತರ ಕೊಟ್ಟಿದ್ದೀರಿ.

ಶ್ರೀ ಹೆಚ್. ವಿಶ್ವನಾಥಯ್ಯ.—ತಾವು ಉತ್ತರದಲ್ಲಿರುವ ಪ್ರಶ್ನೆಯನ್ನು ತೆಗೆದುಕೊಳ್ಳಿ ಬೇಡಿ. ಪ್ರಿಂಟ್ ಆಗಿರುವುದನ್ನು ನೋಡಿ, ನಾನು ಕೊಟ್ಟಿರುವುದು ಸರಿಯಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಸರ್ಕಾರದಿಂದ ಹಣ ರಿಲೀಸ್ ಆಗಿಲ್ಲ.

ಶ್ರೀ ಹೆಚ್. ವಿಶ್ವನಾಥಯ್ಯ.—೯೫ ಲಕ್ಷ ರೂಪಾಯಿಗಳನ್ನು ಈಗಾಗಲೇ ರಿಲೀಸ್ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಹಣವನ್ನು ರಿಲೀಸ್ ಮಾಡದೆ can they acquire power to nominate four persons ?

ಶ್ರೀ ಹೆಚ್. ವಿಶ್ವನಾಥಯ್ಯ.—ನಾಮನಿರ್ದೇಶನ ಮಾಡಿರುವ ಬಗ್ಗೆ ಪ್ರಶ್ನೆ ಮಾಡುವುದಾದರೆ ಅದಕ್ಕೆ ಬೇರೆ ಜಾಗ ಇದೆ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಸೆಕ್ಷನ್ ೫೩(ಎ) ಪ್ರಕಾರ ಸರ್ಕಾರಕ್ಕೆ ಅಧಿಕಾರವಿದೆಯೆಂದು ಭಾವಿಸಿ ನಾಮಕರಣ ಮಾಡಿದ್ದೇವೆ.

ಅರ್ಚಕರಿಗೆ ನೀಡಂವ ತಸ್ಕೀಕ್ ಹಣವನ್ನು ಹೆಚ್ಚಿಸುವುದು

೮೯೯ (೨೧೬೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ ಮಾರಾಕಟ್ಟೆ ಮತ್ತು ಖುಷ್ಕಿ ಭೂ ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಮತ್ತು ಅರ್ಚಕರ ಸಂಖ್ಯೆ ಎಷ್ಟು ?

ಆ) ಆ ಪೈಕಿ ಅರ್ಚಕರಾಗಿ ಹಕ್ಕುಪತ್ರ ಪಡೆದಿರುವ ಮತ್ತು ಕೊಡಬೇಕಾಗಿರುವ ಅರ್ಚಕರುಗಳ ಸಂಖ್ಯೆ ಎಷ್ಟು ?

ಇ) ಸದರಿ ಅರ್ಚಕರಿಗೆ ಕೊಡಲಾಗುತ್ತಿರುವ ತಸ್ಕೀಕ್ ಎಷ್ಟು ಮತ್ತು ಬಾಕಿಯಾಗಿರುವ ತಸ್ಕೀಕ್ ಎಷ್ಟು ?

ಈ) ಅರ್ಚಕರಿಗೂ ಕೊಡಲಾಗುತ್ತಿರುವ ತಸ್ಕೀಕ್ ಮೊತ್ತವನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ದತ್ತಿ ರಾಜ್ಯ ಸಚಿವರು).—

ಅ) ದೇವಸ್ಥಾನಗಳ ಸಂಖ್ಯೆ. ೩೩೦೪೪
ಅರ್ಚಕರ ಸಂಖ್ಯೆ. ೨೪೭೬೪

ಆ) ಹಕ್ಕುಪತ್ರಗಳನ್ನು ದೇವಸ್ಥಾನಗಳ ಹೆಸರಿಗೆ ಕೊಡಲಾಗುವುದೇ ಹೊರತು ಅರ್ಚಕರಿಗೆ ಕೊಡಲಾಗುವುದಿಲ್ಲ

ಕೊಟ್ಟಿರುವುದು — ೨೫೫೯೧
ಬಾಕಿ ೪೮೯೫

ಇ) ತಸ್ಕೀಕ್ ಭತ್ಯೆಯನ್ನು ದೇವಸ್ಥಾನಗಳಿಗೆ ನೀಡಲಾಗುವುದೇ ಹೊರತು ಅರ್ಚಕರಿಗೆ ನೀಡುವುದಿಲ್ಲ.